ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY, RESEARCH AND REFERENCE BRANCH**

**ಪತ್ರಿಕಾ ತುಣುಕುಗಳು**
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ____________

ಪತ್ರಿಕೆಯ ಹೆಸರು : NAME OF THE NEWS PAPER: ____________ ದಿನಾಂಕ : DATE : 17/9/2020

# ಹೊಸ ಸಂಸತ್ ಭವನ ನಿರ್ಮಾಣ ಹೊಣೆ ಟಾಟಾಗೆ

**ನವದೆಹಲಿ:** ರಾಷ್ಟ್ರ ರಾಜಧಾನಿಯಲ್ಲಿ ದೇಶಕ್ಕೆ ಹೊಸ ಸಂಸತ್ ಭವನ ನಿರ್ಮಿಸುವ ನರೇಂದ್ರ ಮೋದಿ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯ ಗುತ್ತಿಗೆ ಪ್ರತಿಷ್ಠಿತ ಟಾಟಾ ಪ್ರಾಜೆಕ್ಟ್ ಲಿ. ಕಂಪನಿಗೆ ಲಭಿಸಿದೆ ಎಂದು ಕೇಂದ್ರ ಸರ್ಕಾರದ ಮೂಲಗಳು ತಿಳಿಸಿವೆ. ಅಂತಿಮ ಸುತ್ತಿನ ಬಿಡ್ ಸಲ್ಲಿಕೆ ಪ್ರಕ್ರಿಯೆಯಲ್ಲಿ ಬುಧವಾರ ಟಾಟಾ ಕಂಪನಿ 861.90 ಕೋಟಿ ರು.ಗೆ ಹಾಗೂ ಎಲ್ ಆ್ಯಂಡ್ ಟಿ ಕಂಪನಿ 865 ಕೋಟಿ ರು.ಗೆ ಬಿಡ್ ಸಲ್ಲಿಸಿದ್ದವು. ನಿಯಮದಂತೆ ಕಡಿಮೆ ಬಿಡ್ ಸಲ್ಲಿಸಿದ ಕಂಪನಿಗೆ ಗುತ್ತಿಗೆ ದೊರೆತಿದೆ. ಅದಕ್ಕೂ ಮುನ್ನ ತಾಂತ್ರಿಕ ಸುತ್ತಿನಲ್ಲಿ ಮೂರು ಕಂಪನಿಗಳು ಆಯ್ಕೆಯಾಗಿದ್ದವು. ಆದರೆ, ಕೊನೆಗೆ ಎರಡೇ ಕಂಪನಿಗಳು ಫೈನಾನ್ಷಿಯಲ್ ಬಿಡ್ ಸಲ್ಲಿಸಿದ್ದವು. ಬಿಡ್ ಗೆದ್ದ ಕಂಪನಿಗೆ ಶೀಘ್ರದಲ್ಲೇ ಅಧಿಕೃತ ಕಾರ್ಯಾದೇಶ ಲಭ್ಯವಾಗಲಿದೆ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ. ಈಗಿರುವ ಸಂಸತ್ ಭವನದ ಸಮೀಪದಲ್ಲೇ ಹೊಸ ಸಂಸತ್ ಭವನ ನಿರ್ಮಾಣವಾಗಲಿದೆ. 21 ತಿಂಗಳ ಅವಧಿಯೊಳಗೆ ನಿರ್ಮಾಣ ಕಾರ್ಯ ಮುಗಿಸಲು ಗುರಿ ಹೊಂದಲಾಗಿದೆ.

**ಹೊಸ ಸಂಸತ್ ಕಟ್ಟಡ ಹೇಗಿರಲಿದೆ?:** ಹೊಸ ಸಂಸತ್ ಭವನ ಮೂರು ಅಂತಸ್ತಿನ ಕಟ್ಟಡವಾಗಿರಲಿದ್ದು, ತ್ರಿಕೋಣಾಕಾರದಲ್ಲಿರಲಿದೆ. ಕಟ್ಟಡ ಒಟ್ಟು 60,000 ಚದರ ಮೀಟರ್ ವಿಸ್ತೀರ್ಣ ಹೊಂದಿರಲಿದೆ.